ಹೀರೋನಂತೆ ಕಾಣುವ ಪ್ರಯತ್ನ ಕೈಬಿಟ್ಟು, ಸಾಮಾನ್ಯ ಮನುಷ್ಯರಂತೆ ನಾನೂ ಕೂಡ ಪಕ್ಕಕ್ಕೆ ಬಾಚಲು ಶುರು ಮಾಡಿದೆ. ಎಲ್ಲರೂ ಎಡಕ್ಕೆ ಕ್ರಾಪ್ ತೆಗೆದರೆ ನನಗೆ ಆದರ್ಶವಾಗಿದ್ದ ಯುವಕನೊಬ್ಬ ಬಲಕ್ಕೆ ಕ್ರಾಪ್ ತೆಗೆಯುತ್ತಿದ್ದ. ಅವನನ್ನು ಅನುಕರಿಸಿ ನಾನೂ ಕೂಡ ಬಲಕ್ಕೆ ಕ್ರಾಪ್ ತೆಗೆಯತೊಡಗಿದೆ. ಕೆಲವು ಹುಡುಗರು ಹೆಣ್ಣುಮಕ್ಕಳಂತೆ ಮಧ್ಯಕ್ಕೆ ಕೂಡ ಕ್ರಾಪ್ ತೆಗೆಯುತ್ತಾರೆ. ಆದರೆ ಈಗಿನ ಎಲ್ಲಾ ಹೆಣ್ಣುಮಕ್ಕಳು ಬೈತಲೆಯನ್ನು ತಲೆಯ ಮಧ್ಯಕ್ಕೆ ತೆಗೆಯುತ್ತಾರೆಂದು ಹೇಳುವುದು ಕಷ್ಟ. ಕೇಶವಿನ್ಯಾಸಗಳನ್ನು ಮಾಡುವವರು, ಮಾಡಿಸಿಕೊಳ್ಳುವವರದ್ದೇ ಒಂದು ಬೇರೆ ಪ್ರಪಂಚವಿದೆ. ಹೀಗೆ ಕೇಶವಿನ್ಯಾಸ ಮಾಡುವವರು ಮದುವೆ, ಮುಂಜಿ, ಗೃಹಪ್ರವೇಶ ಮುಂತಾದ ಸಮಾರಂಭಗಳಲ್ಲಿ ಬ್ಯೂಟೀಷಿಯನ್ ರೂಪದಲ್ಲಿ ಬಂದು ಬಹಳಷ್ಟು ಹಣ ಪೀಕಿ, ಸ್ತ್ರೀಯರನ್ನು ಗುರುತು ಸಿಗದಷ್ಟು ರೂಪಾಂತರ ಮಾಡಿ ಹೋಗುತ್ತಾರೆ.



ಎಪ್ಪತ್ತು- ಎಂಬತ್ತರ ದಶಕದಲ್ಲಿ ಸಿನಿಮಾ ನಾಯಕಿಯರಿಗೆ ಜಾಸ್ತಿ ತಲೆಗೂದಲು ಇರಲಿಲ್ಲವೋ ಅಥವಾ ಫ್ಯಾಷನ್‌ಗಾಗಿ ಹಾಗೇ ಮಾಡುತ್ತಿದ್ದರೋ ಗೊತ್ತಿಲ್ಲ. ಒಟ್ಟಿನಲ್ಲಿ ಆಗಿನ ಹೀರೋಯಿನ್‌ಗಳಿಗೆ ವಿನಾಕಾರಣ ನಿರ್ದೇಶಕರು ದೊಡ್ಡದೊಡ್ಡ ವಿಗ್‌ಗಳನ್ನು, ತಲೆಗಿಂತಲೂ ಭಾರವಾದ ತುರುಬನ್ನು ಕಟ್ಟುತ್ತಿದ್ದರು. ಅದರಲ್ಲೂ ಕಲ್ಪನಾರಂತಹ ಹೀರೋಯಿನ್‌ಗಳ ಕೇಶವಿನ್ಯಾಸವು ಈಗ ಹಳೆಯ ಸಿನಿಮಾ ನೋಡಿದರೆ ಎದ್ದು ಕಾಣುತ್ತಿರುತ್ತದೆ. ಆದರೆ, ತಮ್ಮ ಸ್ವಾಭಾವಿಕ ಹೇರ್‌ಸ್ಟೈಲ್‌ನಿಂದ ಗಮನ ಸೆಳೆದವರು ಅನಂತನಾಗ್ ಮತ್ತು ಶಂಕರನಾಗ್. ಇವರ ಹೇರ್‌ಸ್ಟೈಲ್ ವಿಭಿನ್ನ. ಯಾರದ್ದಾದರೂ ಮುಖಭಾವ ಹೇಳುವಾಗ ಅವನ ಹೇರ್‌ಸ್ಟೈಲ್ ಅನಂತನಾಗ್‌ರಂತೆ ಎಂದು ಹೇಳಿದರೆ ಸಾಕು ಎದುರಿಗಿರುವವರಿಗೆ ಆ ವ್ಯಕ್ತಿಯ ಬಗ್ಗೆ ಒಂದು ಅಂದಾಜು ಸಿಗುತ್ತದೆ.

ನಾವು ಚಿಕ್ಕವರಿದ್ದಾಗ ನಮ್ಮ ಅಜ್ಜನು ನಾಟಕದವರು ಬಿಡುವ ಹಾಗೆ ತಲೆಗೂದಲನ್ನು ಉದ್ದ ಬಿಟ್ಟಿದ್ದ. ಆಗ ಗಂಡಸರೂ ಕೂಡ ತಲೆಗೂದಲನ್ನು ಹೀಗೆ ಉದ್ದ ಬಿಡುತ್ತಿದ್ದರು. ಬರುಬರುತ್ತಾ ಸಿನಿಮಾಗಳಲ್ಲಿ ಹೀಗೆ ಉದ್ದ ಕೂದಲು ಬಿಟ್ಟು, ಜುಟ್ಟು ಕಟ್ಟಿಕೊಳ್ಳುವವರನ್ನು ಹಳ್ಳಿಯ ಮುಗ್ಧ, ಅಮಾಯಕ, ಪೆದ್ದ ಎಂಬುದಾಗಿ ಚಿತ್ರಿಸುತ್ತಿದ್ದರು. ಹಾಗಾಗಿ ಕ್ರಮೇಣ ಉದ್ದ ಕೂದಲಿನವರು ಕ್ರಾಪ್ ಮಾಡಿಸಿಕೊಂಡು ನಗರೀಕರಣಗೊಂಡರು. 'ಮೇಯರ್ ಮುತ್ತಣ್ಣ' ಚಿತ್ರದಲ್ಲಿ ಅಣ್ಣಾವ್ರ ಉದ್ದನೆಯ ತಲೆಗೂದಲನ್ನು ದ್ವಾರಕೀಶ್ ಹೀಗೆ ಕತ್ತರಿಸಿ, ನಗರೀಕರಣ ಮಾಡುವ ಹಾಸ್ಯ ದೃಶ್ಯವಿದೆ. ಇತ್ತೀಚೆಗೆ ಮರೆಯಾಗುತ್ತಿದ್ದ ಈ ಉದ್ದನೆಯ ತಲೆಗೂದಲಿನ ಟ್ರೆಂಡ್ ಮತ್ತೆ ಈಗಿನ ಯುವಜನತೆಯ ತಲೆಗಳಲ್ಲಿ ಕಾಣಿಸುತ್ತಿದೆ.

ಅದರ ಜೊತೆಗೆ ಮುಖವನ್ನೇ ಕಾಣದಂತೆ ಉದ್ದನೆಯ ಗಡ್ಡವನ್ನು ಬಿಡುವುದೂ ಕೂಡ ಒಂದು ಫ್ಯಾಷನ್ ಆಗುತ್ತಿದೆ. ಹೀಗೆ ಹಿಂದೆ ಖಳನಾಯಕರಿಗೆ ಮೀಸಲಾಗಿದ್ದ ಈ ಉದ್ದನೆಯ ತಲೆಗೂದಲು ಮತ್ತು ಗಡ್ಡಗಳಲ್ಲಿ ಮುಖ ಮರೆಸಿಕೊಂಡಿರುವ ಈಗಿನ ಪ್ಯಾನ್ ಇಂಡಿಯಾ ಹೀರೋಗಳ ನಡುವೆ ನಮಗೆ ಚಲನಚಿತ್ರಗಳಲ್ಲಿ ನಾಯಕನಾರು, ಖಳ ನಾಯಕನಾರು ಎಂಬುದೇ ತಿಳಿಯುತ್ತಿಲ್ಲ. ಯುವ ಜನಾಂಗ ಹೀಗೆ ಉದ್ದುದ್ದ ಕೂದಲು ಬೆಳೆಸುತ್ತಾ ತಿರುಗುವುದನ್ನು ನೋಡಿದರೆ ಕ್ರಮೇಣ ಕ್ಷೌರಿಕರೂ ನಿರುದ್ಯೋಗಿಗಳಾಗುವ ಸಂಭವ ದೂರವಿಲ್ಲ ಎನಿಸುತ್ತಿದೆ. ಋಷಿ-ಮುನಿಗಳು, ಭಗ್ನಪ್ರೇಮಿಗಳು ಮತ್ತು ಹೆಂಡತಿ ಅಗಲಿದಾಗ ಮಾತ್ರ ಉದ್ದನೆಯ ಗಡ್ಡ ಬಿಡುತ್ತಾರೆಂಬ ನಂಬಿಕೆಯನ್ನು ಈಗಿನ ಸಿನಿಮಾದವರು ಮತ್ತು ಯುವಜನರು ಸುಳ್ಳು ಮಾಡುತ್ತಿದ್ದಾರೆ. ಈಗೀಗ ಮದುವೆ ರಿಸಪ್ಷನ್‌ಗಳಲ್ಲಿ ಮುಖಕ್ಷೌರ ಮಾಡಿಸಿಕೊಂಡಿರುವ ಮದುಮಗ ಸಿಗುವುದೇ ಬಹಳ ಅಪರೂಪ ಎನ್ನುವಂತೆ ಕೂದಲೂ ಕೂಡ ಕಾಲಕ್ಕೆ ತಕ್ಕಂತೆ ಬದಲಾಗುತ್ತಿದೆ.

ಮುಡಿ ಕೊಡುವುದು ಎಂದರೆ ತಲೆಯನ್ನು ಪೂರ್ತಿ ಬೋಳಿಸಿಕೊಳ್ಳುವುದು. ಮಗುವಿಗೆ ಆರು ತಿಂಗಳೋ, ವರ್ಷವೋ ಆದಾಗ ತಲೆಯ ತುಂಬಾ ಬೆಳೆದ ಕೂದಲನ್ನು ಪ್ರಪ್ರಥಮವಾಗಿ ದೇವರಿಗೆ ಅರ್ಪಿಸುವರು. ಇನ್ನು ತಂದೆ ಅಗಲಿದಾಗ ಕೂಡ ಕೆಲವರು ಕೇಶಮುಂಡನ ಮಾಡಿಸಿಕೊಳ್ಳುತ್ತಾರೆ. ದೇವರಿಗೆ ಹರಕೆ ಹೊತ್ತು, ಇಷ್ಟಾರ್ಥ ಸಿದ್ಧಿಯಾದಾಗ